# ಮಾಗಿ ತಂದ ನೆನಪು

ಮಾವಿನಲ್ಲಿ ತಳಿರುದುಂಬಿ ಹೂವು ಗಂಧವರಳಿ
ಮಧುವ ಹೀರ ಬಂದ ಹಾಗೆ ಜೇನ ಹಿಂಡು ಮರಳಿ
ಏಕೆ ಬಂತು ಮಾಗಿ ಚಳಿಯು ನಿನ್ನ ನೆನಪ ಹೊತ್ತು
ಬೀಸಿ ಹೋದ ತಂಗಾಳಿಯ ಹಿತ ನನಗೂ ನಿನಗೂ ಗೊತ್ತು
ಏಕೆ ಬಂತು ಮಾಗಿ ಚಳಿಯು ನಿನ್ನ ನೆನಪ ಹೊತ್ತು...

ಒಗರು ಸಿಹಿಯು ಕೂಡಿ ಬೆರೆತು ಒಲುಮೆ ಭಾವ ಚಿಗುರಿ
ಬಾಳಿನಲ್ಲಿ ನಲುಮೆ ಗೀತೆ ಹಾಡದೇನೆ ಕಮರಿ
ಹೋದ ಮೇಲೆ ಮತ್ತೆ ಏಕೆ ನೆನಪು ಬಂತು ಮರಳಿ
ದಾಟಿ ಹೋದ ಚೈತ್ರ ಒಮ್ಮೆ ನೋಡಲಿಲ್ಲ ಹೊರಳಿ
ಏಕೆ ಬಂತು ಮಾಗಿ ಚಳಿಯು ನಿನ್ನ ನೆನಪ ಹೊತ್ತು...

ನೆನಪಿನಲೆಯು ಎದೆಯ ಪಾದ ಮತ್ತೆ ಮತ್ತೆ ತೊಳೆದು
ಹಸಿರಾಗಿದೆ ಉಸಿರೊಳಗಡೆ ನಿನ್ನ ಹೆಸರ ಕಡೆದು
ಪ್ರತಿ ಬಡಿತದ ಕಣ ಕಣದಲೂ ನೀನೇ ಜೀವ ಮಿಡಿದು
ಸಂಚರಿಸಿದೆ ಒಳ ಹೊರಗೂ ಒಲುಮೆ ಚಿಲುಮೆ ಹರಿದು
ಏಕೆ ಬಂತು ಮಾಗಿ ಚಳಿಯು ನಿನ್ನ ನೆನಪ ಹೊತ್ತು ...

● **ಬಾಲಕೃಷ್ಣ ದೇವನಮನೆ**

